ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು.):-

ಅ) ದಿನಾಂಕ 21-3-1990 ರಿಂದ ಪ್ರಾರಂಭಿಸಿತು.

ಆ) ರೂ. 1,79,035,563.

ಇ) ಕೆಲಸವು ಮುಗಿದು ಕಾರ್ಯ ಪ್ರಾರಂಭವಾಗಿದೆ. ಆದರೆ ಆಗಿಂದಾಗ್ಗೆ ವಿದ್ಯುತ್ ಸರಬರಾಜಿನಲ್ಲಿ ವೋಲ್ಟೇಜ್ ಏರಿಳಿತಗಳಿಂದ ತಡೆ ಉಂಟಾಗುತ್ತದೆ. ಇದನ್ನು ತಡೆಗಟ್ಟಲು ವೋಲ್ಟೇಜ್ ಸ್ಟಬಿಲೈಜರನ್ನು ಅಳವಡಿಸಲು ಕ್ರಮ ತೆಗೆದುಕೊಂಡಿದೆ.

ಈ) ಕಾರ್ಯ ಪ್ರಾರಂಭವಾಗಿದ್ದರೂ ವಿದ್ಯುತ್ ಸರಬರಾಜಿನಲ್ಲಿ ವೋಲ್ಟೇಜ್ ಏರಿಳಿತಗಳ ತೊಂದರೆಯಿಂದ ಆಗಿಂದಾಗ್ಗೆ ಕೆಲಸ ನಿರ್ವಹಿಸಲು ಆಗುತ್ತಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 28-02-1992 ರಂದು ಉತ್ತರಿಸಬೇಕಾದ 5ನೇ ಪಟ್ಟಿಯ 22 ಪ್ರಶ್ನೆಗಳ ಪೈಕಿ 101, 198, 512, 564, 563, 247, 13, 484, 394, 584, 524, 534, 360, 252, 332 ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 56 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

ಶಿವಮೊಗ್ಗದ ಗಂಧದ ಎಣ್ಣೆ ಕಾರ್ಖಾನೆಯ ಪುನರಾರಂಭ

257(92) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಶಿವಮೊಗ್ಗ ಗಂಧದೆಣ್ಣೆ ಕಾರ್ಖಾನೆಯನ್ನು ಮುಚ್ಚಿ ಎಷ್ಟು ದಿನಗಳಾದವು, ಹಾಗೂ ಆದಕ್ಕೆ ಕಾರಣ ಏನು?

ಆ) ಅದನ್ನು ಪುನರಾರಂಭ ಮಾಡಲು ಸರ್ಕಾರ ಯೋಚಿಸಿರುವುದೇ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು):-

ಅ) ಶಿವಮೊಗ್ಗ ಗಂಧದೆಣ್ಣೆ ಕಾರ್ಖಾನೆಯನ್ನು ಮುಚ್ಚಿರುವುದಿಲ್ಲ.

ಆ) ಮೇಲಿನ ಪ್ರಶ್ನೆಗೆ ಉತ್ತರಿಸಿರುವುದರಿಂದ ಇದು ಉದ್ಭವಿಸುವುದಿಲ್ಲ.

ಪ್ರತಿ ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ತಗಲುವ ಖರ್ಚಿನ ಬಗ್ಗೆ

260 (99) ಶ್ರೀ ಶಿವಾನಂದ ಹೆಚ್. ಕೌಜಲಗಿ(ಬೈಲಹೊಂಗಲ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಗೆ, ಆತನು ಫಾರ್ಮಸಿ ಕೋರ್ಸ್‌ನ್ನು ಮುಗಿಸಲು ತಗಲುವ ವೆಚ್ಚವೆಷ್ಟು?

ಆ) ಖಾಸಗಿ ಫಾರ್ಮಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಆತನು ಫಾರ್ಮಸಿ ಕೋರ್ಸನ್ನು ಮುಗಿಸಲು ತಗಲುವ ವೆಚ್ಚವೆಷ್ಟು? (ಇದರಲ್ಲಿ ಟೀಚಿಂಗ್ ಮತ್ತು ಹಾಸ್ಪಿಟಲ್ ವೆಚ್ಚ ಬೇರೆ ಬೇರೆ ಕೊಡುವುದು)

ಇ) ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ವೆಚ್ಚವೆಷ್ಟು? ಮತ್ತು ಖಾಸಗಿ ಕಾಲೇಜಿನಲ್ಲಿ ಎಷ್ಟು ಖರ್ಚು ಬರುವುದು?